

# ಕೈಹಿಡಿದ ಆಭರಣ ಉದ್ಯಮ

# ನಿಶಾ ಯಶಸ್ಸಿನ ಪಯಣ

**ಹೆಣ್ಣುಮಕ್ಕಳು ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು ಎಂಬ ಮಹತ್ತರ ಉದ್ದೇಶ ಇಟ್ಟುಕೊಂಡ ಪದವೀಧರೆ ನಿಶಾ ನಾಯರ್, ಆಭರಣ ಕ್ಷೇತ್ರದಲ್ಲಿ ಸ್ವಂತ ಉದ್ಯಮ ಸ್ಥಾಪಿಸುವ ಮೂಲಕ ಸಾಮರ್ಥ್ಯ ಮೆರೆದಿದ್ದಾರೆ.**

■ ಉಮಾ ಅನಂತ್

ಯಾವುದೇ ಹೆಣ್ಣುಮಕ್ಕಳಿಗೆ ಆಭರಣ ಕಂಡರೆ ಕಣ್ಣಲ್ಲಿ ಮಿಂಚಿನ ಸಂಚಾರ. ಬೆಂಗಳೂರಿನ 'ಯಾಮಿನಿ ಲೈಫ್‌ಸ್ಟೈಲ್ಸ್' ಸಂಸ್ಥಾಪಕಿ ನಿಶಾ ನಾಯರ್ ಅವರಿಗೆ ತಾನು ಆಭರಣ ಧರಿಸುವುದಕ್ಕಿಂತಲೂ ಬೇರೆಯವರು ಧರಿಸಿ ಖುಷಿಪಡುವುದನ್ನು ನೋಡುವ ತವಕ. ಓದಿದ್ದು ಎಂಬಿಎ. ಕಲಿಕೆಯಲ್ಲಿ ಸದಾ ಮುಂದಿದ್ದ ನಿಶಾ ಅವರಿಗೆ ಯಾವುದಾದರೂ ಕಂಪನಿಯಲ್ಲಿ ಕೆಲಸ ಖಂಡಿತಾ ಸಿಗುತ್ತಿತ್ತು. ಆದರೆ ಇವರ ಆಸಕ್ತಿ ಹೊರಳಿದ್ದು ಕುಶಲಕರ್ಮಿಗಳ ಕೈಯಲ್ಲಿ ಆಭರಣ ತಯಾರಿ ಮಾಡಿಸಿ ಅದನ್ನು ಮಾರಾಟ ಮಾಡುವುದು, ಆಸಕ್ತ ಮಹಿಳೆಯರಿಗೆ ಉದ್ಯೋಗ ನೀಡುವುದು, ಆ ಮೂಲಕ ಆರ್ಥಿಕ ಸ್ವಾವಲಂಬನೆಯ ಹಾದಿ ಹಿಡಿಯುವುದು. ಇದೇ ಕಾರಣಕ್ಕೆ ನಿಶಾ, 2017ರಲ್ಲಿ 'ಯಾಮಿನಿ ಲೈಫ್‌ಸ್ಟೈಲ್' ಸಂಸ್ಥೆ ಆರಂಭಿಸಿದರು.

ಸಾಂಪ್ರದಾಯಿಕ, ಸಮಕಾಲೀನ, ಕರಕುಶಲ ಒಡವೆಗಳನ್ನು ವಿನ್ಯಾಸಗೊಳಿಸಿ ಮಾರುಕಟ್ಟೆಗೆ ನೀಡುವುದು ಈ ಕಂಪನಿಯ ಕೆಲಸ. ಗ್ರಾಹಕರಿಗೆ ಅತ್ಯುತ್ತಮ ಆಭರಣ ನೀಡುವ ಸಲುವಾಗಿ ಕುಶಲಕರ್ಮಿಗಳೊಡನೆ ಸಮನ್ವಯತೆ ಸಾಧಿಸಿರುವ ನಿಶಾ, ದೇಶ ವಿದೇಶಗಳಲ್ಲಿ ಒಡವೆ ವಹಿವಾಟು ನಡೆಸುತ್ತಾರೆ. ವಸ್ತುಪ್ರದರ್ಶನ ಮಳಿಗೆಗಳಲ್ಲಿ ಆಭರಣ ಪ್ರದರ್ಶನ ನಡೆಸುತ್ತಾರೆ.

'ವಾಲ್‌ಮಾರ್ಟ್ ವೃದ್ಧಿ' ಮೂಲಕ ಉತ್ಪನ್ನಗಳನ್ನು ಆಸಕ್ತರಿಗೆ ಪೂರೈಸುವ 'ಯಾಮಿನಿ' ಮೂಲಕ ಮಹಿಳೆಯರ ಮನದಿಂಗಿತ ಅರಿತು ಆಭರಣ ವ್ಯಾಪಾರ ಮಾಡುತ್ತಾರೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಒತ್ತು ನೀಡುತ್ತಾ, ಆನ್‌ಲೈನ್ ವಹಿವಾಟಿನಲ್ಲಿ ಉತ್ತಮ ಗಳಿಕೆ ಪಡೆಯಲಾರಂಭಿಸಿದರು. ಆರಂಭದಲ್ಲಿ ವಾರ್ಷಿಕ 80 ಸಾವಿರ ರೂಪಾಯಿ ಗಳಿಸುತ್ತಿದ್ದ ನಿಶಾ, ಇದೀಗ ವಾರ್ಷಿಕ 34 ಲಕ್ಷ ರೂಪಾಯಿಗಳ ವಹಿವಾಟು ನಡೆಸುತ್ತಾರೆ. ಭಾರತದಾದ್ಯಂತ 70 ಅಂಗಡಿಗಳನ್ನು ಹೊಂದಿ ಸುಮಾರು 150ಕ್ಕೂ ಹೆಚ್ಚು ಮಹಿಳಾ ಕುಶಲಕರ್ಮಿಗಳಿಗೆ ಉದ್ಯೋಗ ಒದಗಿಸಿ, ನಿರುದ್ಯೋಗಿ ಮಹಿಳೆಯರಿಗೆ ಸ್ಫೂರ್ತಿ ನೀಡುವವಂತಾಗಿದ್ದಾರೆ.

ಡಿಜಿಟಲ್ ಮಾರ್ಕೆಟಿಂಗ್ ತರಬೇತಿಯನ್ನೂ ಪಡೆದು ಇದರಲ್ಲೂ ಯಶ ಸಾಧಿಸಿದರು. ಆನ್‌ಲೈನ್ ಮಾರಾಟಕ್ಕಾಗಿ ಫ್ಲಿಪ್‌ಕಾರ್ಟ್ ವೇದಿಕೆ ಜೊತೆಗೆ ಕೈಜೋಡಿಸಿದರು. ಸ್ವಪ್ರಯತ್ನದಿಂದ ಯಶಸ್ಸಿನ ಹಾದಿ ಹಿಡಿದ ನಿಶಾ ನಾಯರ್ ಔದ್ಯೋಗಿಕ ಕ್ಷೇತ್ರದಲ್ಲಿ ಯಶಸ್ಸಿನ ಎತ್ತರಕ್ಕೆ ಏರಿದರು.

ತಮ್ಮ ಔದ್ಯೋಗಿಕ ಪಯಣದ ಬಗ್ಗೆ ನಿಶಾ 'ಸುಧಾ'ದೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

◆ **ಆಭರಣ ಕ್ಷೇತ್ರದಲ್ಲಿ ನಿಮ್ಮ ಪಯಣ ಆರಂಭದ ಬಗ್ಗೆ ಹೇಳಿ.**

ಮಿಲಿಟರಿ ಅಧಿಕಾರಿಯ ಸಂಗಾತಿಯಾಗಿ, ಕರಕುಶಲತೆ, ಸಂಸ್ಕೃತಿ ಮತ್ತು ವಿನ್ಯಾಸದ ಮೇಲಿನ ನನ್ನ ಪ್ರೀತಿಯನ್ನು ಅಭಿವ್ಯಕ್ತಿಸಲು ಒಂದು ವೇದಿಕೆ ಬೇಕಾಗಿತ್ತು. ಮನಸ್ಸಿಗೆ ಖುಷಿ ನೀಡುವ ಕೆಲಸದ ಅಗತ್ಯವಿತ್ತು. ಆಭರಣ ಕ್ಷೇತ್ರವೇ ಇದಕ್ಕೆ ಪರಿಪೂರ್ಣ ಎನಿಸಿತು. ಮಹಿಳೆಯರಿಗೆ, ಕುಶಲಕರ್ಮಿಗಳಿಗೆ ಕೆಲಸ ಕೊಟ್ಟು ಇವರನ್ನೂ ಆರ್ಥಿಕ ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಆಭರಣ ಕ್ಷೇತ್ರಕ್ಕೆ ಕಾಲಿಟ್ಟೆ.



◆ **ಕಂಪನಿ ಪ್ರಾರಂಭಿಸಲು ನಿಮಗೆ ಪ್ರೇರಣೆ ದೊರೆತದ್ದು ಹೇಗೆ?**

ಕರಕುಶಲ ಆಭರಣಗಳ ಮೇಲಿನ ಪ್ರೀತಿ ಮತ್ತು ಭಾರತದ ಸಾಂಪ್ರದಾಯಿಕ ಕಲಾತ್ಮಕತೆಯನ್ನು ಸಮಕಾಲೀನ ರೀತಿಯಲ್ಲಿ ಸಂರಕ್ಷಿಸುವ ಬಯಕೆಯಿಂದ 'ಯಾಮಿನಿ ಲೈಫ್‌ಸ್ಟೈಲ್ಸ್' ಹುಟ್ಟಿಕೊಂಡಿತು. ಮಿಲಿಟರಿ ಅಧಿಕಾರಿಯ ಪತ್ನಿಯಾಗಿ ವಿವಿಧ ನಗರಗಳಿಗೆ ಪ್ರಯಾಣ ಬೆಳೆಸಬೇಕಿತ್ತು. ಅಲ್ಲೆಲ್ಲ ವೈವಿಧ್ಯಮಯ ಆಭರಣಗಳನ್ನು ನೋಡಿದೆ. ಪ್ರತಿ ಬಾರಿ ಪತಿಗೆ ವರ್ಗಾವಣೆಯಾದಾಗಲೂ ಬೇರೆ ಬೇರೆ ಕಡೆಗಳಲ್ಲಿ ಸೌಂದರ್ಯಶಾಸ್ತ್ರದಲ್ಲಿ ನಾನು ಹೊಸ ಸ್ಫೂರ್ತಿಯನ್ನು ಪಡೆದೆ. ಇಂದಿನ ಗ್ರಾಹಕರನ್ನು ಆಕರ್ಷಿಸುವ ಮತ್ತು ಸಂಪ್ರದಾಯ ಗೌರವಿಸುವ ವಿನ್ಯಾಸಗಳನ್ನು ಒಡವೆಯಲ್ಲಿ ಪಡಿಮೂಡಿಸುವ ಆಸಕ್ತಿ ಬೆಳೆಸಿಕೊಂಡೆ. ಕುಶಲಕರ್ಮಿಗಳನ್ನು ಸಂಪರ್ಕಿಸಿ ಅವರೊಂದಿಗೆ ಸಮಾಲೋಚಿಸಿ ಆಭರಣ ವಹಿವಾಟು ಮಾಡುವ ನಿರ್ಧಾರ ಕೈಗೊಂಡೆ. ಇದರ ಫಲವೇ 'ಯಾಮಿನಿ ಲೈಫ್‌ಸ್ಟೈಲ್ಸ್'.

2017ರಲ್ಲಿ ಆರಂಭವಾದ ಸಂಸ್ಥೆ, ಹಂತ ಹಂತವಾಗಿ ಬೆಳೆಯಿತು. 2020ರಲ್ಲಿ 'ವಾಲ್‌ಮಾರ್ಟ್ ವೃದ್ಧಿ' ಜೊತೆ ಕೈಜೋಡಿಸಿ, ಉದ್ಯಮದಲ್ಲಿ ಮಹತ್ವದ ತಿರುವು ಸಿಕ್ಕಿತು. ಹಣಕಾಸು ಯೋಜನೆ ಬಲಪಡಿಸಲು, ಡಿಜಿಟಲ್‌ನತ್ತ ಗಮನಹರಿಸಿದೆ. ಇದರಿಂದ ಒಂದು ಆಭರಣ ಬ್ರ್ಯಾಂಡ್ ಸಿದ್ಧಪಡಿಸಿಕೊಂಡೆ, ನಮ್ಮಲ್ಲಿರುವ ಉತ್ಸಾಹಕ್ಕೆ ಸೂಕ್ತ ಬೆಂಬಲವೂ ಸಿಕ್ಕಿದಾಗ ದೀರ್ಘಕಾಲೀನ ಪ್ರಗತಿ ಸಾಧಿಸಬಹುದು ಎಂಬುದನ್ನು ಅರಿತುಕೊಂಡು ಉದ್ಯಮ ಮುಂದುವರಿಸಿದೆ.

◆ **ನಿಮ್ಮ ಬ್ರ್ಯಾಂಡ್ ಯಾವ ರೀತಿಯ ಆಭರಣಗಳನ್ನು ನೀಡುತ್ತದೆ? ಉದಾಹರಣೆಗೆ ಕೃತಕ, ಅನುಕರಣೆ, ಆಕ್ಸಿಡೀಕೃತ ಅಥವಾ ಒಂದು ಗ್ರಾಂ ಚಿನ್ನ?**

ಶುದ್ಧ ಬೆಳ್ಳಿ ಮತ್ತು ಕರಕುಶಲ ಭಾರತೀಯ ಆಭರಣಗಳ ಮೇಲೆ 'ಯಾಮಿನಿ ಲೈಫ್‌ಸ್ಟೈಲ್ಸ್' ಉದ್ಯಮ ಕೇಂದ್ರೀಕರಿಸಿದೆ. ಅಲ್ಲದೆ ಕರಕುಶಲ ಕಲಾಕೃತಿಗಳನ್ನೂ ಮಾರಾಟ ಮಾಡುತ್ತೇವೆ, ನಮ್ಮ ಪರಂಪರೆಯ ಐತಿಹ್ಯ, ಭಾರತೀಯ ಕರಕುಶಲತೆಯಲ್ಲಿ ಬೇರೂರಿರುವ ಸಾಂಪ್ರದಾಯಿಕ, ಕುಶಲಕರ್ಮಿಗಳ ಕೈಚಳಕದಿಂದಾಗಿ ಸಮಕಾಲೀನ ಒಡವೆಗಳನ್ನು ಗ್ರಾಹಕರಿಗೆ ತಲುಪಿಸಲು ಸಾಧ್ಯವಾಗಿದೆ.

(ಅನಿವಾರ್ಯ ಕಾರಣಗಳಿಂದ ಈ ವಾರ ಪದಬಂಧ ಹಾಗೂ ಪ್ರಶ್ನಾಂಕಣ ಅಂಕಣ ಪ್ರಕಟವಾಗಿಲ್ಲ – ಸಂ.)